
# ಬೆಳಕಿನ ಸಂಚಲನ

ಸಂಪುಟ 11, ಸಂಚಿಕೆ 1 | ದ್ವೈಮಾಸಿಕ ವಾರ್ತಾಪತ್ರ | ಜನವರಿ–ಫೆಬ್ರುವರಿ 2023



**ಗುರೂಜಿ ಕೃಷ್ಣಾನಂದ** (1939-2012)

### ಬೆಳಕು

ಇದು ಭೌತಿಕ ಮಟ್ಟದ ಬೆಳಕಲ್ಲ, ಅತ್ಯಂತ ಸೂಕ್ಷ್ಮ ಬೆಳಕು. ಈ ಬೆಳಕು ಎಲ್ಲ ಸೃಷ್ಟಿಯ ಮೂಲ. ಎಲ್ಲ ಸಕ್ರಿಯ ಶಕ್ತಿಗಳ ಮೂಲ. ಪ್ರೀತಿ, ಶಾಂತಿ, ಸತ್ಯ, ವಿವೇಕ ಮತ್ತು ಸಮಸ್ತ ಜೀವ ರಾಶಿಗಳ ಮೂಲ. ಈ ಬೆಳಕೇ ದೇವರು.

### ಚಾನಲಿಂಗ್

ಬೆಳಕನ್ನು ನಮ್ಮೊಳಗೆ ಪ್ರವೇಶಿಸುವಂತೆ ಉದ್ದೇಶಿಸಿ, ನಂತರ ಇಡೀ ಪ್ರಪಂಚಕ್ಕೆ ಹರಡುವಂತೆ ಮಾಡುವುದೇ ಚಾನಲಿಂಗ್. ನಮ್ಮ ಶರೀರ ಬೆಳಕಿನ ಅತ್ಯುನ್ನತ ತರಂಗಗಳನ್ನು ಸ್ಥೂಲ ಮಟ್ಟದ ತರಂಗಗಳಾಗಿ ಬದಲಾಯಿಸುತ್ತದೆ.

ಬೆಳಕಿನ ಕಂಪನಗಳು ಎಲ್ಲ ಜೀವಿಗಳನ್ನು ಮತ್ತು ಪ್ರಕೃತಿಯನ್ನು ತಲುಪುತ್ತವೆ. ಅವು ಹೀಲಿಂಗ್ ಚೈತನ್ಯಗಳನ್ನು, ಪ್ರೇಮ, ಶಾಂತಿ ಮತ್ತು ಸಕಾರಾತ್ಮಕತೆಗಳನ್ನು ಹೊಂದಿರುತ್ತವೆ. ಅವು ಪರಿವರ್ತನೆಗೆ ಸಹಾಯ ಮಾಡುತ್ತವೆ. ನಾವು ಉತ್ತಮ ಮಾನವ ಜೀವಿಗಳಾಗುತ್ತೇವೆ. ನಮ್ಮ ಪ್ರಪಂಚ, ಉತ್ತಮ ಪ್ರಪಂಚವಾಗುತ್ತದೆ.

### ತಂತ್ರ

ನಿಮ್ಮ ಮೇಲೆ ಬೆಳಕಿನ ಸಾಗರವಿದೆ ಎಂದು ಕಲ್ಪಿಸಿಕೊಳ್ಳಿ. ಬೆಳಕು ನಿಮ್ಮ ದೇಹದೊಳಕ್ಕೆ ಬಂದು ತುಂಬಿಕೊಂಡಂತೆ ಭಾವಿಸಿ. ನಂತರ ಬೆಳಕಿನಲ್ಲಿರುವ ಪ್ರೇಮ ಮತ್ತು ಶಾಂತಿಗಳನ್ನು ಒಂದು ನಿಮಿಷದವರೆಗೆ ಅನುಭವಿಸಿ. ಆ ಬೆಳಕು ಕ್ರಮೇಣ ನಿಮ್ಮ ಮನೆ, ಸುತ್ತಮುತ್ತಲ ಪ್ರದೇಶ, ದೇಶ ಮತ್ತು ಪ್ರಪಂಚಕ್ಕೆ ಹರಡಿದಂತೆ ಕಲ್ಪಿಸಿಕೊಳ್ಳಿ.

ಇದನ್ನು ಕನಿಷ್ಟ 7 ನಿಮಿಷ ಅಭ್ಯಾಸ ಮಾಡಿ.

### ಲೈಟ್ ಚಾನಲ್ಸ್ ವಿಶ್ವ ಸಂಚಲನ

ಈ ಸಂಚಲನವನ್ನು ಋಷಿಮಾರ್ಗದ ಸಂಸ್ಥಾಪಕರಾದ ಗುರೂಜಿ ಕೃಷ್ಣಾನಂದರವರು 18-05-2008 ರಂದು ಪ್ರಾರಂಭಿಸಿದರು.

ಈ ಸಂಚಲನವೆಂದರೆ ಬೆಳಕನ್ನು ಪ್ರತಿ ದಿನ ಏಳು ನಿಮಿಷಗಳವರೆಗೆ ಬೆಳಿಗ್ಗೆ ಎದ್ದಾಗ ಅಥವಾ ರಾತ್ರಿ ಮಲಗುವ ಮೊದಲು ನಮ್ಮ ನಮ್ಮ ಸ್ಥಳಗಳಿಂದಲೇ ಚಾನಲ್ ಮಾಡುವುದು.

ಈ ಸಂಚಲನದ ಗುರಿ ಮುಖ್ಯವಾಗಿ ಈ ಭೂಮಿಯ ಮೇಲೆ ಶಾಂತಿಯನ್ನು ತರುವುದು.

### ಸಂಚಲನದ ವೈಶಿಷ್ಟ್ಯತೆ

- ಬೆಳಕಿನಿಂದ ಏಕತೆ.
- ಇದು ಧಾರ್ಮಿಕ ಚಟುವಟಿಕೆಯಲ್ಲ. ವಿಶ್ವಾತ್ಮಕವಾದದ್ದು.
- ಇಲ್ಲಿ ಯಾವುದೇ ಕಟ್ಟುಪಾಡುಗಳಿಲ್ಲ.
- ಇಲ್ಲಿ ಸದಸ್ಯತ್ವವಿಲ್ಲ.
- ಶಾಂತಿ ನೆಲೆಸಲು ಪ್ರತಿಯೊಬ್ಬರೂ ನೆರವಾಗಬಹುದು.
- ಇದು ಪ್ರತಿ ವ್ಯಕ್ತಿಗೆ ಮತ್ತು ವಿಶ್ವಕ್ಕೆ ಸಹಾಯಕಾರಿ.
- ಹೊಸಯುಗಕ್ಕೆ ಪ್ರವೇಶಿಸಲು ಇದು ನಮ್ಮನ್ನು ಮತ್ತು ವಿಶ್ವವನ್ನು ಸಿದ್ಧಗೊಳಿಸುತ್ತದೆ.

## ಒಂದು ಸಂದೇಶ

**ಗುರೂಜಿ ಕೃಷ್ಣಾನಂದ**

(ಗುರೂಜಿಯವರು ಡಿಸೆಂಬರ್ 23, 1990ರಂದು ಮಾಡಿದ ಭಾಷಣದ ಆಯ್ದ ಭಾಗಗಳು)

**ಅನು: ಕಾಂಚನಲತಾ**

ಇತರರನ್ನು ಮೆಚ್ಚಿಸಲು ಮತ್ತು ನಮ್ಮ ಬಗ್ಗೆ ಸದಭಿಪ್ರಾಯ ಮೂಡಿಸಲು, ನಮ್ಮ ಜೀವನದಲ್ಲಿ ನಾವು ಎಲ್ಲವನ್ನೂ ಮಾಡುತ್ತೇವೆ. ನಮಗಿಷ್ಟ ಬಂದಂತೆ ನಾವೇಕೆ ಬದುಕುವುದಿಲ್ಲ? ಏಕೆಂದರೆ, ನಮಗೆ ಧೈರ್ಯವಿಲ್ಲ ಮತ್ತು ನಮ್ಮಲ್ಲಿ ದೃಢನಂಬಿಕೆಯಿಲ್ಲ. ಅರೆಬರೆ ತಿಳುವಳಿಕೆ ಮತ್ತು ತಪ್ಪು ದಾರಿಗಳನ್ನು ಹಾಗೂ ಇಬ್ಬಗೆಯ ನೀತಿಗಳನ್ನು ಅನುಸರಿಸುತ್ತಿರುವುದು ಇದಕ್ಕೆ ಕಾರಣವಾಗಿದೆ.

ಸತ್ಯವನ್ನು ನಾವಾಗಿಯೇ ಅರಿಯಬೇಕು. ನಮ್ಮನ್ನು ನಾವು ತೆರೆದಿಟ್ಟುಕೊಳ್ಳಬೇಕು. ಧ್ಯಾನವೊಂದೇ ನಮಗೆ ಸತ್ಯದೊಂದಿಗೆ ನಿಲ್ಲುವ ಅಂತಃಶಕ್ತಿಯನ್ನು ನೀಡುತ್ತದೆ. ನಾವು ಪ್ರಾಮಾಣಿಕವಾಗಿ ಈ ಮಾರ್ಗದಲ್ಲಿ ಮುನ್ನಡೆಯಬೇಕು. ಅದು ಖಂಡಿತವಾಗಿ ನಮ್ಮನ್ನು ದೇವರ ಬಳಿ ಕೊಂಡೊಯ್ಯುತ್ತದೆ. ಒಮ್ಮೆ ನಾವು ದೇವರನ್ನು ತಲುಪಿದಾಗ, ನಮ್ಮ ಜೀವನ ಬದಲಾಗುತ್ತದೆ.

ನಮ್ಮಲ್ಲಿ ಆಳವಾಗಿ ಬೇರೂರಿರುವ ಕೊಳೆಯನ್ನು ಬುಡಸಮೇತ ತೆಗೆದು ಹಾಕಬೇಕು ಮತ್ತು ಪರಿಶುದ್ಧರಾಗಬೇಕು. ಆಗ, ನಾವು ಭಗವಂತನೊಂದಿಗೆ ಶ್ರುತಿಗೊಳ್ಳಬಹುದು ಮತ್ತು ಅವನೊಂದಿಗೆ ಸಂಪರ್ಕ ಕಲ್ಪಿಸಿಕೊಳ್ಳಬಹುದು. ಇದರ ಪರಿಣಾಮವಾಗಿ ಪ್ರೀತಿ ಮತ್ತು ಸಾಮರಸ್ಯ ಉಂಟಾಗುತ್ತದೆ.

## ಘಟನಾವಳಿಗಳು

**ಜಯಂತ್ ದೇಶ್‌ಪಾಂಡೆ; ಅನು: ಕಾಂಚನಲತಾ**

ಯುದ್ಧ, ವಿವಿಧ ಮಟ್ಟಗಳಲ್ಲಿನ ಅವ್ಯವಸ್ಥೆಗಳು, ಕ್ರೌರ್ಯ ಮತ್ತು ಭ್ರಷ್ಟಾಚಾರದಂತಹ ಸುದ್ದಿಗಳಿಂದ ಮಾಧ್ಯಮಗಳು ತುಂಬಿಹೋಗಿರುವಾಗ, ಜಗತ್ತಿನ ಶಾಂತಿಯ ಬಗ್ಗೆ ನಿಜವಾಗಿಯೂ ನಾವು ಭರವಸೆ ಇಟ್ಟುಕೊಳ್ಳಬಹುದೆ? ಮಾಧ್ಯಮಗಳ ಗಮನ ನಕಾರಾತ್ಮಕ ಸುದ್ದಿಗಳತ್ತ ಇರುವುದರಿಂದ ಇಡೀ ಜಗತ್ತೇ ನಕಾರಾತ್ಮಕವಾಗಿದೆ ಎಂಬ ಅಭಿಪ್ರಾಯವನ್ನು ಅದು ನಮಗೆ ನೀಡುತ್ತದೆ. ನಮ್ಮ ಸುತ್ತಲಿನ ಜೀವನವನ್ನು ಎಚ್ಚರಿಕೆಯಿಂದ ಗಮನಿಸಿದರೆ, ವಾರ್ತಾ ಮಾಧ್ಯಮಗಳನ್ನು ನೋಡಿ ನಾವು ನಂಬಿರುವಷ್ಟು ನಕಾರಾತ್ಮಕವಾಗಿ ಈ ಪ್ರಪಂಚ ಇಲ್ಲ, ಎಂಬುದರ ಅರಿವು ನಮ್ಮಲ್ಲಿ ಮೂಡುತ್ತದೆ. ಸಾಮಾನ್ಯ ಮನುಷ್ಯನಲ್ಲಿ ಒಳ್ಳೆಯತನದ ಬೆಳಕು ಇನ್ನೂ ಮಿನುಗುತ್ತಿದೆ ಎಂಬುದನ್ನು ನಾವು ಕಾಣಬಹುದಾಗಿದೆ. ಅವರ ಒಳ್ಳೆಯತನದಲ್ಲಿ ಒಂದು ಉತ್ತಮ ಜಗತ್ತಿನ ಭರವಸೆಯನ್ನು ನಾವು ಕಾಣುತ್ತೇವೆ.

ನಾವು ಈ ಜಗತ್ತನ್ನು ಹೆಚ್ಚಿನ ಬೆಳಕಿನಿಂದ ತುಂಬಿದಾಗ, ಉತ್ತಮ ಭವಿಷ್ಯದ ನಮ್ಮ ಭರವಸೆಯನ್ನು ಬಲಗೊಳಿಸಲು ವಿಶ್ವ ಚಾನಲ್‌ಗಳ ದಿನವು (World Channels Day) ಮತ್ತೊಂದು ಅವಕಾಶವನ್ನು ತರುತ್ತದೆ.

## ಬೆಳಕಿನ ಕ್ರಿಯಾಶಕ್ತಿ

**ಮನೋಜ್ ಚೋಪ್ರ; ಅನು: ಕಾಂಚನಲತಾ**

13ನೇ ವಿಶ್ವ ಚಾನೆಲ್ಸ್ ದಿನವು 1ನೇ ಫೆಬ್ರವರಿ 2023ರಂದು ಜರುಗಲಿದೆ. ಇದು ಒಂದು ಭಾವನಾತ್ಮಕವಾದ, ಅತ್ಯುತ್ಸಾಹದ ಮತ್ತು ಸಂಭ್ರಮಾಚರಣೆಯ ದಿನ. ನಮ್ಮ ಕಾರ್ಯಕರ್ತರಿಗೆ ಇದೊಂದು ಮಹತ್ತರವಾದ ದಿನ. ನಾವು ಇದನ್ನು ಪ್ರತಿ ವರ್ಷ ಆಚರಿಸಿದರೂ ಕೂಡ, ಪ್ರತಿ ಬಾರಿಯೂ ಇದರ ಅನುಭವ ವಿಶಿಷ್ಟವಾಗಿರುತ್ತದೆ. ನಮ್ಮ ಕಾರ್ಯಕರ್ತರು, ಅವರ ತಯಾರಿಗಳಲ್ಲಿ ಮತ್ತು ಯೋಜನೆಗಳಲ್ಲಿ, ಕಾಣದ ಕೈಗಳಿಂದ ಒಂದು ವಿಶೇಷ ತೆರನಾದ ಮಾರ್ಗದರ್ಶನ ಮತ್ತು ಸಹಾಯದ ಅನುಭವವನ್ನು ಪಡೆಯುತ್ತಾರೆ. ನಮ್ಮ ಪ್ರೀತಿಯ ಮಾಸ್ಟರುಗಳಿಂದ ಆಶೀರ್ವಾದ ಪಡೆದು, ಡಿಸೆಂಬರ್ 25ರಿಂದಲೇ ಅವರು ಯೋಜನೆಗಳ ತಯಾರಿ ನಡೆಸಿದ್ದಾರೆ.

ಕಳೆದ ಎರಡು ವರ್ಷಗಳಲ್ಲಿ, ಕೋವಿಡ್ ನಿಯಮಾವಳಿಗಳಿಂದಾಗಿ ನಾವು ಶಾಲೆಗಳನ್ನು ಭೇಟಿ ಮಾಡಲು ಸಾಧ್ಯವಾಗಿರಲಿಲ್ಲ ಆದರೆ ಶಾಲೆಗಳ ಅಧಿಕಾರಿಗಳಿಂದ ನಮಗೆ ಅಗಾಧವಾದ ಪ್ರತಿಕ್ರಿಯೆ ದೊರೆಯಿತು. ಈ ಬಾರಿಯೂ ಅದೇ ರೀತಿಯ ಬೆಂಬಲವನ್ನು ನಾವು ನಿರೀಕ್ಷಿಸುತ್ತೇವೆ. ನಿಮಗೆ ಅನುಕೂಲವಾದ ಸಮಯದಲ್ಲಿ 3–7 ನಿಮಿಷಗಳವರೆಗೆ ಬೆಳಕನ್ನು ಚಾನೆಲ್ ಮಾಡುವುದರ ಮೂಲಕ ಈ ಸಂಚಲನಕ್ಕೆ ಬೆಂಬಲ ನೀಡಬೇಕೆಂದು ಕೋರುತ್ತೇವೆ.

**ಮಾನಸ ಫೌಂಡೇಶನ್ (ರಿ)**
ತಪೋನಗರ, ಚಿಕ್ಕಗುಬ್ಬಿ, (ಹೆಣ್ಣೂರು–ಬಾಗಲೂರು ರಸ್ತೆ), ಬೆಂಗಳೂರು-560077, ಭಾರತ.
ಫೋನ್: (080) 2846 5280, 99000 75280 (10am to 5pm), ಇ–ಮೇಲ್: info@lightagemasters.com
website : www.lightagemasters.com, www.lightchannels.com

## ಬೆಳಕಿನ ಮಾಸ್ಟರ್‌ಗಳ ವಿವೇಕವಾಣಿ

- ಅಹಂಕಾರವನ್ನು ಕೆಳಗೆ ಇಟ್ಟಾಗ ಮಾತ್ರವೇ, ಯಾವುದೇ ಮಹತ್ವದ ಕೆಲಸ ಮಾಡಲು ಸಾಧ್ಯ.
- ದೇವರ ಅನುಗ್ರಹ, ಜ್ಞಾನ ಮತ್ತು ಚೈತನ್ಯಗಳಿಗೆ ಗುರು ಒಂದು ಚಾನೆಲ್.
- ಆಂತರಿಕ ಮತ್ತು ದೈನಂದಿನ ಜೀವನದ ಸಮಸ್ಯೆಗಳನ್ನು ಪರಿಹರಿಸಿಕೊಳ್ಳಲು, ಮಾನವನು ಧ್ಯಾನದ ಮಾರ್ಗವನ್ನು ಪರಿಗಣಿಸಬೇಕು.
- ಯಾವುದೇ ಪರಿಸ್ಥಿತಿಯಲ್ಲಿಯೂ, ನಾವು ವಾಸ್ತವವನ್ನು ಪ್ರಶಾಂತತೆಯಿಂದ ಸ್ವೀಕರಿಸಬೇಕು ಮತ್ತು ಶಾಂತ–ವಾಗಿರಬೇಕು. ನಾವು ಹತಾಶೆ ಮತ್ತು ಭಯದಿಂದ ದೂರವಿರಬೇಕು.
- ಪ್ರೀತಿ ದೈವಿಕವಾದದ್ದು. ಅದು ಸಹಜವಾದ ಭಾವನೆ. ಅತ್ಯುತ್ತಮವಾದ ಉದಾಹರಣೆಯೆಂದರೆ ಸೂರ್ಯೋ–ದಯ, ಚಂದವಾದ ಹೂವು, ಮಗುವಿನ ನಗು ಇವುಗಳಿಗೆ ನಾವು ತೋರುವ ಪ್ರತಿಕ್ರಿಯೆ.
- ನಮ್ಮ ಸ್ವಭಾವ ಪ್ರೀತಿ. ದೇವರೇ ಪ್ರೀತಿ. ಅವನು ಪ್ರೀತಿಯ ಕಂಪನಗಳನ್ನು ನಮಗೆ ಕಳುಹಿಸುತ್ತಿರುತ್ತಾನೆ ಆದರೆ ನಮಗೆ ಅವುಗಳ ಅರಿವಿರುವುದಿಲ್ಲ.
- ಒಬ್ಬ ವ್ಯಕ್ತಿ ಎಲ್ಲದರಲ್ಲೂ ದೇವರನ್ನು ನೋಡಿ ಸೇವೆ ಮಾಡಿದಾಗ, ಆ ಪ್ರೀತಿ ಶ್ರೇಷ್ಠವಾದದ್ದು ಮತ್ತು ದಿವ್ಯವಾದುದು.
- ಸೇವೆಯು ದೇವರ ಮೇಲೆ ಇರುವ ಪ್ರೀತಿಯನ್ನು ಅಭಿವ್ಯಕ್ತಪಡಿಸುವುದಾಗಿದೆ. ಪ್ರೀತಿಯು ಬಲವಾದ ಭಾವನೆ, ಅದು ಎಲ್ಲವನ್ನು ಸರಿಹೊಂದಿಸಿಕೊಳ್ಳುತ್ತದೆ. ಪ್ರೀತಿಯು ಕೋಪ, ದ್ವೇಷ ಮತ್ತು ಬೇರೆ ಎಲ್ಲ ನಕಾರಾತ್ಮಕತೆಗಳನ್ನು ಗೆಲ್ಲುತ್ತದೆ.
- ಮನಸ್ಸು ತಳಮಳಗೊಂಡರೆ, ದೇಹವು ಆಯಾಸ–ಗೊಳ್ಳುತ್ತದೆ. ಮನಸ್ಸನ್ನು ಸಮತೋಲನವಾಗಿಟ್ಟುಕೊಳ್ಳಿ, ಅತಿಯಾಗಿ ಪ್ರತಿಕ್ರಿಯಿಸಬೇಡಿ. ಶಾಂತಿಯುತವಾದ ಆಲೋಚನೆಗಳಿಗೆ ಮತ್ತು ವಿಚಾರಗಳಿಗೆ ಅವಕಾಶ ಕೊಡಿ.
- ದೇಹವನ್ನು ಬಿರುಸಾಗಿ ಚಲಿಸಬೇಡಿ. ಅತಿಯಾಗಿ ಆಹಾರ ಸೇವಿಸುವುದು ಅಥವಾ ಬಹಳ ಹೊತ್ತು ಉಪವಾಸವಿರುವ ಮೂಲಕ ಅನಾವಶ್ಯಕವಾಗಿ ದೇಹಕ್ಕೆ ಶ್ರಮಕೊಡಬೇಡಿ.
- ದೇವರನ್ನು ಎಲ್ಲರಲ್ಲೂ ಮತ್ತು ಎಲ್ಲದರಲ್ಲೂ ಗುರುತಿಸಿ ಮತ್ತು ಗೌರವಿಸಿ.
- ನಿಮ್ಮನ್ನು ಮತ್ತು ನಿಮ್ಮ ಸುತ್ತ ಇರುವ ಎಲ್ಲವನ್ನೂ ಸುಂದರವಾಗಿಟ್ಟುಕೊಳ್ಳಿ.
- ದೇಹವು ದೇವರಿಂದ ಕೊಡಲ್ಪಟ್ಟ ವಾಹನ. ರೋಗ–ರಹಿತವಾಗಿ ಅದನ್ನು ಇಟ್ಟುಕೊಳ್ಳಬೇಕು. ದೇಹವನ್ನು ಸುಂದರವಾಗಿಟ್ಟುಕೊಳ್ಳುವುದು ಅನಾಧ್ಯಾತ್ಮಿಕವಲ್ಲ. ನಮ್ಮ ಮನಸ್ಸಿನಲ್ಲಿ ಸುಂದರವಾದ ಭಾವನೆಗಳನ್ನು ಮತ್ತು ಬುದ್ಧಿಯಲ್ಲಿ ಉನ್ನತವಾದ ಆಲೋಚನೆಗಳನ್ನು ಹೊರ–ತರಬೇಕು.
- ಬೇರೆಯವರ ಏಕಾಂತತೆಯನ್ನು ಗೌರವಿಸಿ ಮತ್ತು ಅದನ್ನು ಕದಡಬೇಡಿ.
- ಕೋಪ ಅಂತರವನ್ನುಂಟುಮಾಡುತ್ತದೆ. ಕೋಪ ನಮ್ಮಲ್ಲಿ ದುಡುಕು ಹಾಗೂ ಹಗೆತನವನ್ನು ಉಂಟುಮಾಡುತ್ತದೆ. ಕೋಪದಲ್ಲಿ ತಪ್ಪು ನಿರ್ಧಾರಗಳನ್ನು ತೆಗೆದುಕೊಳ್ಳುತ್ತೇವೆ. ಇದೆಲ್ಲಾ ತಿಳಿದಿದ್ದರೂ ಕೂಡ ನಾವು ಅದಕ್ಕೆ ಅಧೀನರಾಗುತ್ತೇವೆ.
- ಕೋಪದಲ್ಲಿ ನಾವು ನಮ್ಮ ಸಂಬಂಧಗಳನ್ನು ಕಳೆದು–ಕೊಳ್ಳುತ್ತೇವೆ, ನಮ್ಮ ಜೀವನವನ್ನು ಕಳೆದುಕೊಳ್ಳುತ್ತೇವೆ ಹಾಗೂ ಆಧ್ಯಾತ್ಮಿಕವಾಗಿ ಕೆಳಗೆ ಬೀಳುತ್ತೇವೆ. ಪ್ರಯತ್ನಿಸಿದರೆ, ನಾವು ಕೋಪವನ್ನು ಜಯಿಸಬಹುದೆಂದು ಮನಗಾಣುತ್ತೇವೆ.

–ಗುರೂಜಿ ಕೃಷ್ಣಾನಂದ



ಬೆಂಗಳೂರಿನ ವಿಜಯ ವಿಟ್ಟಲ ತಾಂತ್ರಿಕ ಮಹಾವಿದ್ಯಾಲಯದ ಪ್ರಥಮ ವರ್ಷದ BE ವಿದ್ಯಾರ್ಥಿಗಳು ತಪೋನಗರದ ಮಾನಸ ಫೌಂಡೇಷನ್‌ನಲ್ಲಿ ನವೆಂಬರ್ 15, 2022ರಂದು ನಡೆದ ಲೈಟ್ ಚಾನಲಿಂಗ್ ಸೆಷನ್‌ನಲ್ಲಿ ಲೈಟ್ ಚಾನಲ್ ಮಾಡುತ್ತಿರುವುದು.



ಬೆಂಗಳೂರಿನ ಕೂಕ್ ಟೌನ್‌ನಲ್ಲಿರುವ ಲೈಟ್ ಚಾನಲಿಂಗ್ ಕೇಂದ್ರದ 10ನೇ ವರ್ಷದ ವಾರ್ಷಿಕೋತ್ಸವವನ್ನು ಡಿಸೆಂಬರ್ 16, 2022 ರಂದು ಆಚರಿಸಲಾಯಿತು.



ಬೆಂಗಳೂರಿನ ಮತ್ತಿಕೆರೆಯಲ್ಲಿರುವ ಶಾಲೆಯೊಂದರ ಮಕ್ಕಳು ಡಿಸೆಂಬರ್ 21, 2022ರಂದು ಲೈಟ್ ಚಾನಲ್ ಮಾಡುತ್ತಿರುವುದು.

## ಜಯಂತ್ ದೇಶ್‌ಪಾಂಡೆ ಅವರ ಭಾಷಣದಿಂದ ಆಯ್ದ ಭಾಗಗಳು

18 ಡಿಸೆಂಬರ್ 2022

ಈ ಸಮಯ ಬಹಳ ಕಷ್ಟದ ಸಮಯ; ಬಹಳ ಗೊಂದಲದ ಸಮಯ. ಇದು ಕತ್ತಲ ಯುಗದಿಂದ ನವಯುಗಕ್ಕೆ ಪರಿವರ್ತನೆ ಹೊಂದುವ ಕಾಲ. ಈ ಪರಿವರ್ತನೆ ಆಗುವುದಕ್ಕಾಗಿ, ನಾವು ಮಂಥನದ (churning) ಪ್ರಕ್ರಿಯೆಗೆ ಒಳಗಾಗುತ್ತೇವೆ. ಇದು ತೀವ್ರವಾದ ಪ್ರಳಯದ ಸಮಯ. ಪ್ರಳಯ ಎಂದರೆ ಬದಲಾವಣೆ; ಸಕಾರಾತ್ಮಕ ಬದಲಾವಣೆ ಎಂದು ಮಹರ್ಷಿ ಅಮರರವರು ವಿವರಿಸಿದ್ದರು. ಅದು ವಿನಾಶವಲ್ಲ. ಈ ಪ್ರಕ್ರಿಯೆಯು ನಮ್ಮಲ್ಲಿ ಬದಲಾವಣೆಯನ್ನು ತರಲು ಸಹಾಯ ಮಾಡುತ್ತದೆ, ಒಬ್ಬ ಆಧ್ಯಾತ್ಮಿಕ ವ್ಯಕ್ತಿಯಾಗಿ ಮಾರ್ಪಾಡಾಗಲು ನಮಗೆ ಸಹಾಯ ಮಾಡುತ್ತದೆ.

ಪ್ರಳಯದ ಪ್ರಕ್ರಿಯೆಯು, ನಕಾರಾತ್ಮಕತೆಯನ್ನು ಹೊರಗೆಸೆಯಲು, ಅಂತರಾಳದಲ್ಲಿರುವ ಅಂಧಕಾರವನ್ನು ಹೊರಗೆಸೆದು ಸಕಾರಾತ್ಮಕರಾಗಲು; ಬೆಳಕಾಗಲು ಸಹಾಯ ಮಾಡುತ್ತದೆ. ಪ್ರಳಯವು ವೈಯಕ್ತಿಕ ಮಟ್ಟದಲ್ಲಿ ಮತ್ತು ಸಮಾಜ, ರಾಷ್ಟ್ರಗಳು ಮತ್ತು ಜಾಗತಿಕ ಮಟ್ಟಗಳಲ್ಲಿಯೂ ಕೂಡ ಸಂಭವಿಸುತ್ತದೆ. ವ್ಯಕ್ತಿಗಳಾದ ನಮಗೆ ವೈಯಕ್ತಿಕ ಮಟ್ಟದಲ್ಲಿ ನಡೆಯುವ ಬದಲಾವಣೆಯ ಪ್ರಕ್ರಿಯೆಯು ಅತ್ಯಂತ ಪ್ರಮುಖವಾದುದು. ನಮಗೇ ಅರಿವಿಲ್ಲದ ನಮ್ಮೊಳಗಿರುವ ನಕಾರಾತ್ಮಕತೆಯ ಬಗ್ಗೆ ಅರಿವನ್ನು ಮೂಡಿಸಲು ಈ ಪ್ರಕ್ರಿಯೆಯು ಸಹಾಯ ಮಾಡುತ್ತದೆ. ನಮ್ಮೊಳಗಿರುವ ನಕಾರಾತ್ಮಕತೆಯ ಬಗ್ಗೆ ನಮಗೆ ಅರಿವು ಮೂಡಿದಾಗ, ಅವುಗಳನ್ನು ಹೊರಗೆಸೆಯಲು ಸುಲಭವಾಗುತ್ತದೆ.

ಮಹರ್ಷಿ ಅಮರರವರು ಈ ಅತಿ ಕಠಿಣವಾದ ಸಮಯವನ್ನು ದಾಟಲು ಬಹಳ ಮುಖ್ಯವಾದ ಮಾರ್ಗವನ್ನು ನೀಡಿದ್ದರು. "ಅವ್ಯವಸ್ಥೆಯ ಮತ್ತು ಗೊಂದಲಗಳಿಂದ ಕೂಡಿದ ಈ ಕಷ್ಟದ ಸಮಯವನ್ನು ದಾಟಲು, ಆಧ್ಯಾತ್ಮಿಕ ಕೊಡೆಯ ಅಡಿಯಲ್ಲಿ ರಕ್ಷಣೆ ಪಡೆದುಕೊಳ್ಳಿ" ಎಂದು ಅವರು ಹೇಳಿದ್ದರು. ಆಧ್ಯಾತ್ಮಿಕ ಕೊಡೆ ಎಂದರೇನು? ಹಾಗೆಂದರೆ, ಒಳ್ಳೆಯವರಾಗಿರುವುದು, ಪ್ರಾಮಾಣಿಕರಾಗಿರುವುದು ಮತ್ತು ಶಾಂತಿಯಿಂದಿರುವುದು; ಅದು ಸರಳತೆಯಿಂದಿರುವುದು. ಈ ಮೌಲ್ಯಗಳನ್ನು ಪಾಲಿಸುವುದು ಯಾವುದೇ ಸಮಯದಲ್ಲಿ ಅತಿ ಮುಖ್ಯವಾದ ಅಭ್ಯಾಸವಾಗಿರುತ್ತದೆ ಅದರಲ್ಲೂ ಇಂತಹ ಸಮಯಗಳಲ್ಲಿ ಬಹು ಮುಖ್ಯವಾಗುತ್ತದೆ. ನಾವು ಇವುಗಳನ್ನು ಪ್ರಜ್ಞಾಪೂರ್ವಕವಾಗಿ ಅಭ್ಯಾಸ ಮಾಡಿದಾಗ, ನಾವು ಆಧ್ಯಾತ್ಮಿಕ ಕೊಡೆಯ ಅಡಿಯಲ್ಲಿ ಬರುತ್ತೇವೆ.

ಈ ಮೌಲ್ಯಗಳಾದ ಪ್ರಾಮಾಣಿಕತೆ, ಒಳ್ಳೆಯತನ ಮತ್ತು ಶಾಂತಿಯನ್ನು ಪಾಲಿಸಲು ಲೈಟ್ ಚಾನಲಿಂಗ್‌ನ ಅಭ್ಯಾಸವು ಸಹಾಯ ಮಾಡುತ್ತದೆ. ಲೈಟ್ ಚಾನೆಲಿಂಗ್ ನಮ್ಮನ್ನು ಅತ್ಯುನ್ನತ ಬುದ್ಧಿಶಕ್ತಿಗೆ ಅಂದರೆ ದೇವರಿಗೆ ಸಂಪರ್ಕ ಕಲ್ಪಿಸುತ್ತದೆ. ಈ ಸಂಪರ್ಕವು ಭಗವಂತನಿಂದ ನಮಗೆ ಅದ್ಭುತವಾದ ಚೈತನ್ಯಗಳನ್ನು ಪಡೆಯಲು ಸಹಾಯ ಮಾಡುತ್ತದೆ. ಈ ಚೈತನ್ಯಗಳು ನಮಗೆ ವಿವೇಕವನ್ನು ಮತ್ತು ಒಳ್ಳೆಯತನ ಹಾಗೂ ಪ್ರಮಾಣಿಕತೆಯನ್ನು ಮುಂದುವರೆಸಲು ಅದ್ಭುತವಾದ ಶಕ್ತಿಯನ್ನು ನೀಡುತ್ತದೆ. ಆದುದರಿಂದಲೇ ಈ ದಿನಗಳಲ್ಲಿ ಲೈಟ್ ಚಾನೆಲಿಂಗ್ ಒಂದು ಬಹು ಮುಖ್ಯವಾದ ಅಭ್ಯಾಸವಾಗಿದೆ. ಇದು ವೈಯಕ್ತಿಕವಾಗಿ ನಮಗೆ ಸಹಾಯ ಮಾಡುವುದಲ್ಲದೆ, ಇತರರಿಗೂ ಸಹಾಯ ಮಾಡುತ್ತದೆ. ನಮ್ಮ ಅಭ್ಯಾಸದಿಂದ, ಇತರರಿಗೆ ಬೆಳಕನ್ನು ಸ್ವೀಕರಿಸಲು ಸುಲಭವಾಗುತ್ತದೆ. ನಾವು ಸಕಾರಾತ್ಮಕವಾಗಿ ಕಂಪಿಸಿದಾಗ, ನಮ್ಮ ಕಂಪನಗಳು ಇತರರಿಗೆ ಸಹಾಯ ಮಾಡುತ್ತವೆ, ಅವರಿಗೆ ಸಕಾರಾತ್ಮಕರಾಗಲು ಸ್ಫೂರ್ತಿ ನೀಡುತ್ತವೆ. ವೈಯಕ್ತಿಕ ಪರಿವರ್ತನೆಯ ಈ ಇಡೀ ಪ್ರಕ್ರಿಯೆಯು ಬಹಳ ಸುಂದರವಾದ ಪ್ರಕ್ರಿಯೆಯಾಗಿದೆ; ಒಂದು ಸುಂದರವಾದ ಪಯಣವಾಗಿದೆ.

ಪ್ರಾಮಾಣಿಕತೆ, ಒಳ್ಳೆಯತನ ಮತ್ತು ಶಾಂತಿಯಂತಹ ಮೌಲ್ಯಗಳನ್ನು ನಾವು ಪಾಲಿಸಿದಾಗ, ನಮಗೆ ತಿಳಿದೋ ಅಥವಾ ತಿಳಿಯದೆಯೋ, ನಾವು ಬೆಳಕನ್ನು ಪ್ರಕಟಪಡಿಸುತ್ತಿರುತ್ತೇವೆ. ಇದರ ಕುರಿತು ಆಲೋಚಿಸಿದಾಗ, ನಮ್ಮ ಪಾತ್ರವನ್ನು ನಿರ್ವಹಿಸುವುದು ಒಂದು ಅದ್ಭುತವಾದ ಗೌರವವೆನಿಸುತ್ತದೆ. ಇದೊಂದು ಸಣ್ಣ ಪಾತ್ರದಂತೆ ತೋರಬಹುದು, ಆದರೆ ಅಂಧಕಾರದಿಂದ ಬೆಳಕಿನ ಕಡೆಗಿನ ಈ ಜಾಗತಿಕ ಪರಿವರ್ತನೆಯ ಪ್ರಕ್ರಿಯೆಯಲ್ಲಿ ಇದೊಂದು ಬಹಳ ಪ್ರಮುಖವಾದ ಪಾತ್ರವಾಗಿದೆ. ■

### ಲೈಟ್ ಚಾನಲಿಂಗ್ ಕೇಂದ್ರಗಳು

ಕೆಳಗೆ ತಿಳಿಸಿದ ನಮ್ಮ ಲೈಟ್ ಚಾನಲಿಂಗ್ ಕೇಂದ್ರದಲ್ಲಿ ಸ್ಥಳೀಯರು ಲೈಟ್ ಚಾನಲ್ ಮಾಡಲು ನಿಗದಿಪಡಿಸಿದ ಸಮಯದಲ್ಲಿ ಒಟ್ಟಿಗೆ ಸೇರುತ್ತಾರೆ. ಇದರಲ್ಲಿ ಭಾಗವಹಿಸಲು ಎಲ್ಲರಿಗೂ ಸ್ವಾಗತ. ಯಾವುದೇ ಶುಲ್ಕವಿಲ್ಲ ಹಾಗೂ ಸದಸ್ಯರಾಗಬೇಕಾಗಿಲ್ಲ.

**ಶುಕ್ರವಾರ** (ಬೆಳಿಗ್ಗೆ 11 ರಿಂದ 11.15ರ ತನಕ)
ಸಿದ್ಧಿ ವಿನಾಯಕ ದೇವಸ್ಥಾನ, 59/1,
ಹಚಿನ್ಸ್ ರಸ್ತೆ, 3ನೇ ಅಡ್ಡ ರಸ್ತೆ,
ಕೂಕ್ ಟೌನ್, ಬೆಂಗಳೂರು.
✆ 9980205803 ನಿರ್ಮಲ ಬಾಲ

### ಶಾಲೆಗಳಲ್ಲಿ ಲೈಟ್ ಚಾನಲಿಂಗ್

| | | |
|---|---|---|
| ಭಾಗವಹಿಸಿದ ಶಾಲೆಗಳ ಸಂಖ್ಯೆ | : | 5779 |
| ಲೈಟ್ ಚಾನಲ್ ಮಾಡಿರುವ ವಿದ್ಯಾರ್ಥಿಗಳ ಸಂಖ್ಯೆ | : | 29.71 ಲಕ್ಷ |

ನಿಮ್ಮ ತರಗತಿಗಳ ಪ್ರಾರಂಭದಲ್ಲಿ ಲೈಟ್ ಚಾನಲಿಂಗ್ ಅನ್ನು ಪ್ರತಿನಿತ್ಯ 3–7 ನಿಮಿಷಗಳ ಕಾಲ ಮಾಡಿಸುವುದರ ಮೂಲಕ ಲೈಟ್ ಚಾನಲ್ಸ್ ವಿಶ್ವ ಸಂಚಲನವನ್ನು ಬಲಗೊಳಿಸಲು ಸಹಾಯ ಮಾಡಿ.

ಲಕ್ಷಾಂತರ ಜನರು ನಿಯತವಾದ ಲೈಟ್ ಚಾನಲಿಂಗ್ ಅಭ್ಯಾಸದಿಂದ ಪ್ರಯೋಜನಗಳನ್ನು ಪಡೆದಿದ್ದಾರೆ. ಅನೇಕರು ಸೋಜಿಗವೆನಿಸುವಂತಹ ಸಹಾಯವನ್ನು ಹಾಗೂ ಅದ್ಭುತವಾದ ಅನುಭವಗಳನ್ನು ಪಡೆದಿದ್ದಾರೆ. ನಿಮ್ಮ ಅನುಭವಗಳು ಇತರರಿಗೆ ಸ್ಫೂರ್ತಿ ನೀಡಬಹುದು ಹಾಗೂ ಮಾರ್ಗದರ್ಶನ ಕೂಡ ಮಾಡಬಹುದು. ದಯವಿಟ್ಟು ನಿಮ್ಮ ಅನುಭವಗಳನ್ನು ನಮ್ಮ ಜೊತೆ ಹಂಚಿಕೊಳ್ಳಿ. ನಮ್ಮ ಇ-ಮೇಲ್ info@lightagemasters.com ಗೆ ಬರೆಯಿರಿ.

ಅನೇಕ ಮಕ್ಕಳ, ಶಿಕ್ಷಕರ ಹಾಗೂ ಕಾರ್ಯಕರ್ತರ ಅನುಭವಗಳನ್ನು 'Experiences of Light Channels' ಎಂಬ ಪುಸ್ತಕದಲ್ಲಿ ಸಂಗ್ರಹಿಸಲಾಗಿದೆ. ಈ ಪುಸ್ತಕ ಹೊರತಂದ ಮೇಲೆ ಮತ್ತೆ ಅನೇಕರು ತಮ್ಮ ಅನುಭವಗಳನ್ನು ಹಂಚಿಕೊಂಡಾಗ, ಎರಡನೆಯ ಸಂಪುಟವನ್ನು ಹೊರ ತರಲಾಯಿತು. ಈ ಎರಡೂ ಸಂಪುಟಗಳನ್ನು ನಮ್ಮ ವೆಬ್‌ಸೈಟ್ www.lightagemasters.com ನಿಂದ ಉಚಿತವಾಗಿ ಡೌನ್‌ಲೋಡ್ (download) ಮಾಡಿಕೊಳ್ಳಬಹುದು.



# ವಿಶ್ವ ಚಾನಲ್ಸ್ ದಿನ

**1ನೇ ಫೆಬ್ರುವರಿ 2023**

**ಮಾನಸ ಫೌಂಡೇಶನ್‌ನಿಂದ ಶಾಲಾ ಅಧಿಕಾರಿಗಳಿಗೆ ಒಂದು ಮನವಿ**

ಮಾನ್ಯರೇ,

ಫೆಬ್ರುವರಿ 1, 2023 ರಂದು 13ನೇ 'ವಿಶ್ವ ಚಾನಲ್ಸ್ ದಿನ'ವನ್ನು ಆಚರಿಸಲಾಗುತ್ತದೆ. ಆ ದಿನ ನಿಮ್ಮ ಪ್ರಾರ್ಥನಾ ಸಮಯದಲ್ಲಿ ಅಥವಾ ಇನ್ನಾವುದೇ ಅನುಕೂಲವಾದ ಸಮಯದಲ್ಲಿ ಕೆಳಗೆ ತಿಳಿಸಿರುವ ರೀತಿಯಲ್ಲಿ ನಿಮ್ಮ ಶಾಲೆಗಳಲ್ಲಿ ಲೈಟ್ ಚಾನಲ್ ಮಾಡಿಸುವುದರ ಮೂಲಕ ಈ ಸಂಚಲನದಲ್ಲಿ ಭಾಗವಹಿಸಬೇಕೆಂದು ಕೋರುತ್ತೇವೆ.

1. **ಸಂಕ್ಷಿಪ್ತವಾಗಿ ಪರಿಚಯಿಸಿ:**

ಈ ದಿನ 'ವಿಶ್ವ ಚಾನಲ್ಸ್ ದಿನ'. ಈ ದಿನ ಪ್ರೀತಿ ಮತ್ತು ಶಾಂತಿಯನ್ನು ಭೂಮಾತೆಯ ಮೇಲೆ ಹರಡುವ ದಿನ. ಈ ಭೂಮಿಯ ಮೇಲೆ ಶಾಂತಿ ನೆಲೆಸಲಿ ಎಂಬ ಒಂದು ಬಲವಾದ ಸಂಕಲ್ಪ ಮಾಡಿಕೊಳ್ಳೋಣ. ಭಾರತದಾದ್ಯಂತ 5 ಲಕ್ಷಕ್ಕೂ ಹೆಚ್ಚು ಮಕ್ಕಳು ನಿಮ್ಮ ಜೊತೆ ಈ ದಿನ ಲೈಟ್ ಚಾನಲ್ ಮಾಡುತ್ತಾರೆ.

2. **ಕೆಳಕಂಡ ಲೈಟ್ ಚಾನಲಿಂಗ್ ತಂತ್ರವನ್ನು ಕನಿಷ್ಠ 3 ನಿಮಿಷಗಳ ಕಾಲ ಅಭ್ಯಾಸ ಮಾಡಿಸಿ:**

❖ ನಿಮ್ಮ ಕಣ್ಣುಗಳನ್ನು ಮುಚ್ಚಿ, ವಿಶ್ರಮಿಸಿ.

❖ ನಿಮ್ಮ ತಲೆಯ ಮೇಲೆ ಒಂದು ಬೆಳಕಿನ ಸಾಗರವನ್ನು ಊಹಿಸಿಕೊಳ್ಳಿ.

❖ ಬೆಳಕು ನಿಧಾನವಾಗಿ ನಿಮ್ಮೊಳಗೆ ಇಳಿದು ನಿಮ್ಮ ದೇಹವನ್ನು ತುಂಬಿಕೊಳ್ಳುತ್ತಿದೆ ಎಂದು ಭಾವಿಸಿಕೊಳ್ಳಿ.

❖ ನಂತರ ಬೆಳಕಿನಲ್ಲಿರುವ ಶಾಂತಿ ಮತ್ತು ಪ್ರೀತಿಯನ್ನು 1 ನಿಮಿಷ ಕಾಲ ಅನುಭವಿಸಿ.

❖ ನಂತರ ಆ ಬೆಳಕು ನಿಮ್ಮಿಂದ ಹೊರ ಬರುತ್ತಾ ನಿಧಾನವಾಗಿ ನಿಮ್ಮ ಸುತ್ತಲೂ ಹರಡಿ, ನಿಮ್ಮ ಶಾಲೆ, ಬಡಾವಣೆ, ದೇಶ ಮತ್ತು ಇಡೀ ಜಗತ್ತಿಗೇ ಹರಡುತ್ತಿದೆ ಎಂದು ಭಾವಿಸಿಕೊಳ್ಳಿ.

❖ ಬೆಳಕಿಗೆ ವಂದಿಸಿ ನಿಧಾನವಾಗಿ ಕಣ್ಣು ತೆರೆಯಿರಿ.

******

ಸಾಧ್ಯವಾದರೆ, ಬೆಂಗಳೂರಿನ ತಪೋನಗರದಲ್ಲಿರುವ ಮಾನಸ ಫೌಂಡೇಶನ್‌ನಲ್ಲಿ ನಡೆಯುವ ನೇರ ಆನ್‌ಲೈನ್ ಕಾರ್ಯಕ್ರಮದಲ್ಲಿ ವೆಬ್‌ಕಾಸ್ಟ್ (webcast) ಮೂಲಕ ಭಾಗವಹಿಸಬೇಕೆಂದು ಕೋರುತ್ತೇವೆ. ವೆಬ್‌ಕಾಸ್ಟ್ ನೇರ ಪ್ರಸಾರದ ಲಿಂಕ್: www.lightagemasters.com

ಸಮಯ: ಇಂಗ್ಲಿಷ್‌ನಲ್ಲಿ ಬೆಳಿಗ್ಗೆ 8 ಘಂಟೆಗೆ ಮತ್ತು ರಾತ್ರಿ 9 ಘಂಟೆಗೆ. ಇಂಗ್ಲಿಷ್ ಮತ್ತು ಕನ್ನಡದಲ್ಲಿ ಮಧ್ಯಾಹ್ನ 12 ಘಂಟೆಗೆ. ಹಿಂದಿ ಮತ್ತು ಮರಾಠಿಯಲ್ಲಿ ಸಂಜೆ 6 ಘಂಟೆಗೆ.

ವಂದನೆಗಳು.

ಲೈಟ್ ಚಾನಲ್ಸ್ ಕನ್ನಡ ದ್ವೈಮಾಸಿಕ ಪತ್ರಿಕೆ, ಖಾಸಗಿ ಪ್ರಸಾರಕ್ಕಾಗಿ ಮಾತ್ರ. ಸಂಪಾದಕರು, ಪ್ರಕಾಶಕರು ಮತ್ತು ಮುದ್ರಕರು: ಶ್ರೀದೇವಿ (ಮಾನಸ ಫೌಂಡೇಶನ್ (ರಿ) ಪರವಾಗಿ)
ಪ್ರಕಾಶನ ಸ್ಥಳ: ಮಾನಸ ಫೌಂಡೇಶನ್ (ರಿ), ತಪೋನಗರ, ಚಿಕ್ಕಗುಬ್ಬಿ (ಹೆಣ್ಣೂರು–ಬಾಗಲೂರು ರಸ್ತೆ), ಬೆಂಗಳೂರು-560077
ಮುದ್ರಣ ಸ್ಥಳ: ಲೋಟಸ್ ಪ್ರಿಂಟರ್ಸ್ ಪ್ರೈ. ಲಿ., ಫೋನ್: 23380167 / 23209909, ಇಮೇಲ್: lotus.creation777@gmail.com, ವೆಬ್‌ಸೈಟ್: www.lotusprinters.com
ಮಾಲೀಕರು: ಮಾನಸ ಫೌಂಡೇಶನ್ (ರಿ), ತಪೋನಗರ, ಚಿಕ್ಕಗುಬ್ಬಿ (ಹೆಣ್ಣೂರು–ಬಾಗಲೂರು ರಸ್ತೆ), ಬೆಂಗಳೂರು - 560077. ಸಂಪಾದಕರು: ಶ್ರೀದೇವಿ